# 4

# ಕೃತಜ್ಞತೆಯುಳ್ಳ ಉಪದೇಶಕನು

## (1 ಥೆಸಲೋನೀಕ 2:13-20)

ಪೌಲನು ಥೆಸಲೊನೀಕದವರೊಂದಿಗೆ ವಿಶೇಷವಾದ ಬಾಂದವ್ಯವನ್ನು ಹೊಂದಿದ್ದನು. 2:13-20ರಲ್ಲಿ, ಥೆಸಲೊನೀಕದವರನ್ನು ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರನ್ನಾಗಿ ಪಡೆದಿರುವದಕ್ಕಾಗಿ ಪೌಲನು ಸಂತೋಷವನ್ನು ವ್ಯಕ್ತಪಡಿಸಿದನು. ಪೌಲ, ಸೀಲ, ಮತ್ತು ತಿಮೊಥೆಯರನ್ನು ಫಿಲಿಪ್ಪಿಯಿಂದ ಥೆಸಲೊನೀಕಕ್ಕೆ ಹಿಂದಟ್ಟಿದ್ದರಿಂದ ಈ ಒಂದು ಸಂಬಂಧವು ಉಂಟಾಗಲಿಲ್ಲ. ಹಾಗೂ ಅವರು ಅಲ್ಲಿರುವಾಗ ಈ ಒಂದು ಅನ್ಯೋನ್ಯತೆಯು ಉಂಟಾಗಿ ಅವರು ಅಲ್ಲಿಂದ ಪ್ರತ್ಯೇಕ ಗೊಂಡಾಗ ಈ ಅನ್ಯೋನ್ಯತೆಯು ಅಳಿದು ಹೋಗಲಲ್ಲ. ಅದು ಜೀವಿತ ಕಾಲದ ಅನ್ಯೋನ್ಯತೆಗಿಂತಲೂ ಹೆಚ್ಚಾದದ್ದಾಗಿ; ಆ ಬೋಧಕರ ಮನಸ್ಸಿನಲ್ಲಿ ನಿತ್ಯವಾದ ಬಾಂದವ್ಯವಾಗಿ ನೆಲೆಸಿತ್ತು.

ನಾವು ಇತರರಿಗೆ ಬೋಧಿಸುವಾಗ, ಜೊತೆ ಕ್ರೈಸ್ತರಿಗೆ ಸಲಹೆ ನೀಡುವಾಗ, ದೇವರ ಚಿತ್ತಕ್ಕೆ ಒಳಪಡುವಂತೆ ಸಹೋದರ ಸಹೋದರಿಯರನ್ನು ಉತ್ತೇಜಿಸುವಾಗ, ನಾವುಗಳು ನಿತ್ಯ ವಾದ ಅನ್ಯೋನ್ಯತೆಯನ್ನು ಕಟ್ಟುವವರಾಗಿರುತ್ತೇವೆ. ಬೋಧಿಸುವ ಸಲಹೆ ನೀಡುವ, ಹಾಗೂ ಇತರರನ್ನು ಉತ್ತೇಜಿಸುವ ಮೂಲಕ ದೇವರ ಸಭೆಯು ಮಾಡಬೇಕಾದ ಕಾರ್ಯವನ್ನು ಮಾಡುವಂತೆ ಬೆಲೆಬಾಳುವ ಪಾತ್ರವನ್ನು ಹೊಂದಿರುತ್ತೇವೆ.

### ದೇವರ ವಾಕ್ಯವೇ ಕಾರ್ಯ ನಿರ್ವಹಿಸಲಿ (2:13)

ಬೋಧಕರುಗಳು ದೇವರ ವಾಕ್ಯವನ್ನು ಅನುಸರಿಸುವಾಗ ಏನು ಸಂಭವಿಸುತ್ತದೆ? ಅವರು ದೇವರ ವಾಕ್ಯವನ್ನು ಅನುಸರಿಸಿದಂತೆ, ಅವರ ವಿದ್ಯಾರ್ಥಿಗಳು ಅವರನ್ನು ಅನುಸರಿಸು ವಾಗ ಏನಾಗುತ್ತದೆ? ಅದ್ಭುತವಾದ ಸಂಗತಿಗಳು ನಡೆಯುತ್ತವೆ! ಪ್ರಸಂಗವು ದೇವರ ಸಂದೇಶ ವಾಗಿದ್ದು ಮತ್ತು ಆ ವಾಕ್ಯದ ಮೂಲಕ ಅವರು ತಮ್ಮನ್ನು ದೇವರಿಗೆ ಸಮರ್ಪಿಸಿಕೊಂಡಿರುವರು ಎಂಬ ಅರಿವು ಉಂಟಾಗುವಾಗ, ಅವರ ಜೀವಿತದಲ್ಲಿ ದೇವರು ಕಾರ್ಯನಡೆಸುತ್ತಾನೆ. ಆಗ ಜೀವಿತಗಳು ನಿತ್ಯತ್ವಕ್ಕೆ ಮಾರ್ಪಡುತ್ತವೆ!

1:2, 3ರಲ್ಲಿರುವ ಕೃತಜ್ಞತೆಯ ಆಲೋಚನೆಯು ಪುನಃ ಪರಿಚಯಗೊಂಡು ಮತ್ತೇ 2:13ರಲ್ಲಿ ವಿಸ್ತರಣೆ ಮಾಡಲಾಗಿದೆ. ವಚನ 13ರಲ್ಲಿ ಪೌಲನು ಮತ್ತು ಇತರ ಬೋಧಕರುಗಳು ನಿರ್ದಿಷ್ಟವಾದ ಕಾರಣಕ್ಕಾಗಿ ಕೃತಜ್ಞರಾಗಿರುವದನ್ನು ತಿಳಿಸಲಾಗಿದೆ: ಈ ಜನರು ಸುವಾರ್ತೆಗೆ ತೋರಿದ ಪ್ರತಿಕ್ರಿಯೆ ಇದಾಗಿರುತ್ತದೆ. ಹೊಸದಾಗಿ ಬದಲಾವಣೆಗೊಂಡಿದ್ದ ಥೆಸಲೊನೀಕ ಕ್ರೈಸ್ತರಿಗಾಗಿ ದೇವರು ಇಂತಹ ಸಂದೇಶವನ್ನಿಟ್ಟಿದ್ದನು. ಇದರ ನಿಮಿತ್ತ ಅವರಿಗೆ ಸ್ಫೂರ್ತಿ ಉಂಟಾಯತು. ಆದ್ದರಿಂದ ದೇವರು ಇವರ ಒಳತಿಗೋಸ್ಕರ ಚಿಂತಿಸುವವನು ಮತ್ತು ತನ್ನ ರಕ್ಷಣಾ ಕಾರ್ಯವನ್ನು ಯೇಸುವಿನ ಮೂಲಕ ಪ್ರಚುರಪಡಿಸಿರುವನೆಂಬ ಅರ್ಥ. ದೇವರು ಅವರಿಗೆ ಸಹಾಯಿಸಲು ಬಯಸಿ ಮತ್ತು ಆತನ ನಿತ್ಯದ ಗುರಿಯ ಕಡೆಗೆ ಅವರನ್ನು ಸಾಗಿಸಲು ಸಿದ್ಧಪಡಿಸಿದನೆಂಬ ಅರಿವನ್ನು ಹೊಂದಿಕೊಂಡರು. ಇದರ ಫಲಿತಾಂಶವೇನೆಂದರೆ ದೇವರ ಬಯಕೆಯನ್ನೇ ಈಡೇರಿಸುವಂತದ್ದು ಅವರ ಮೊದಲ ಆದ್ಯತೆಯಾಗಿತ್ತು. ಸುವಾರ್ತೆಯು ಅವರಿಗೆ ದೇವರಿಂದಲೇ ದೊರಕಿತು ಎಂಬುದನ್ನು ತಿಳಕೊಂಡರು!

ಬೋಧಿಸುವದರ ಮೂಲಕ ದೇವರ ವಾಕ್ಯವು ನಿಮ್ಮಲ್ಲಿ ಕಾರ್ಯನಿರ್ವಹಿಸಲಿ, ಅದರಲ್ಲಿ

ನೀವು ಆಸಕ್ತಿ ಹೊಂದಿರುವದರಿಂದ ಇತರರಲ್ಲಿ ಅದು ಕಾರ್ಯಉಂಟುಮಾಡಲಿ. ದೇವರ ವಾಕ್ಯವು ಕಾರ್ಯ ನಿರ್ವಹಿಸಲಿ ಅದು ಕ್ರೈಸ್ತರನ್ನು ವೈಯಕ್ತಿಕವಾಗಿಯೂ ಮತ್ತು ಸಂಪೂರ್ಣ ಸಭೆಯನ್ನೂ ಬದಲಾಯಿಸುತ್ತದೆ.

## ನಂಬಿಗಸ್ತರಾದವರನ್ನು ಅನುಸರಿಸಿರಿ (2:14, 15ಎ)

ಸುವಾರ್ತಾ ಸಂದೇಶವನ್ನು ಸ್ವೀಕರಿಸಿ, ದೇವರು ನಮಗಾಗಿ ಇಟ್ಟಿರುವ ಯೋಜನೆಯನ್ನು ಅರಿಯುವದು ಒಂದು ವಿಷಯವಾಗಿದ್ದು, ಕಷ್ಟದ ಸನ್ನಿವೇಶದಲ್ಲಿ ವಾಕ್ಯಕ್ಕೆ ನಂಬಿಗಸ್ತರಾಗಿ ರುವದು ಇನ್ನೊಂದು ವಿಷಯವಾಗಿರುತ್ತದೆ. ಹೊಸ ಕ್ರೈಸ್ತರು ಹಾಗೂ ದೃಢವಾಗಿ ಇರುವ ಕ್ರೈಸ್ತರುಗಳು, "ನಮ್ಮ ಕುಟುಂಬಗಳು ನಮಗೆ ಅಡಚಣೆ ಉಂಟುಮಾಡಿದರೆ ನಾನೇನು ಮಾಡಲಿ? ನನ್ನ ಜೊತೆ ಕೆಲಸದವನು ನನ್ನ ಸೇವೆ ಯಲ್ಲಿ ನಿಂದನೆಯನ್ನು ಉಂಟು ಮಾಡಿದರೆ ಏನು ಮಾಡಲಿ?"; "ಸೈತಾನನು ಪ್ರಯತ್ನಿಸಿ ನನ್ನನ್ನು ನಾಶಮಾಡಬೇಕೆಂದಿರುವ ಈ ಜೀವಿತ ವನ್ನು ಹೇಗೆ ಪ್ರಾರಂಭಿಸಲಿ?" ಎಂಬ ಪ್ರಶ್ನೆಗಳಿಗೆ ಉತ್ತರ ನೀಡಬೇಕು.

ಥೆಸಲೊನೀಕದವರು, ಹಿಂಸೆಗೆ ಯಾವ ಪ್ರತಿಕ್ರಿಯೆಯನ್ನು ನೀಡಿದರು? ಅದನ್ನು ಅವರು ಸಹಿಸಿಕೊಂಡರು, ಮತ್ತು ನಂಬಿಗಸ್ತರಾಗಿಯೇ ಉಳಿದರು (2:14, 15ಎ) ಕೆಲವು ದೇಶಗಳಲ್ಲಿ ಸಾರ್ವಜನಿಕ ಆರಾಧನೆಯನ್ನು ನಿಷೇದಗೊಳಿಸಲಾಗಿದೆ. ಆ ನಿಷೇದಗಳ ಮಧ್ಯದಲ್ಲಿ ಕ್ರೈಸ್ತ ಜೀವನ ಕಷ್ಟಕರ ಎಂದು ಭಾವಿಸಬಹುದು. ಯಾವುದೇ ಸನ್ನಿವೇಶದಲ್ಲೂ, ನಾವುಗಳು ಕರ್ತನ ಸೇವೆ ಮಾಡಬಹುದು ಎಂಬ ಅರಿವನ್ನು ನಾವು ಹೊಂದಿಕೊಳ್ಳಬೇಕು - ಅದು ಒಂದು ವೇಳೆ ದಾಸತ್ವ ಅಥವಾ ಹಿಂಸೆಯ ಸನ್ನಿವೇಶವೇ ಆಗಿರಬಹುದು.

ದೇವರು ಅನುಗ್ರಹಿಸಿರುವ ಸ್ವಾತಂತ್ರಕ್ಕಾಗಿ ನಾವು ದೇವರಿಗೆ ಸ್ತೋತ್ರ ಹೇಳಬೇಕು. ಯಾಕಂದರೆ ಕೆಲವರು ಕರ್ತನ ನಿಮಿತ್ತ ಹಿಂಸೆಯನ್ನು ಅನುಭವಿಸುತ್ತಿದ್ದರು. ನಾವುಗಳು ಸಕಲ ಸನ್ನಿವೇಶಗಳಲ್ಲೂ ನಂಬಿಗಸ್ತರಾಗಿರಬೇಕೆಂದು ದೇವರು ಬಯಸುತ್ತಾನೆ ಕಷ್ಟಗಳ ನಿಮಿತ್ತ ವಾಗಿ, ದೇವರ ಸೇವೆಯನ್ನು ಬಿಟ್ಟು ಬಿಡುವ ಶೋಧನೆಯನ್ನು ಎದುರಿಸಬೇಕು. ಸ್ನೇಹಿತರಿಂದ, ಅಥವಾ ವಿರೋಧಿಗಳಿಂದ, ಸಂಬಂಧಿಕರಿಂದ, ಅಥವಾ ನಮ್ಮ ಸಹೋದರರಿಂದಲೇ ಉಂಟಾಗಬಹುದಾದ ವಿರೋಧದ ನಿಮಿತ್ತವೂ, ನಂಬಿಗಸ್ತರಾಗಿಯೇ ಉಳಿಯಬೇಕು.

ಹಿಂಸೆಯ ನಡುವೆಯೂ ಥೆಸಲೊನೀಕದರು ನಂಬಿಗಸ್ತರಾಗಿದ್ದರಿಂದ, ಅವರು ದೇವರ ನಂಬಿಗಸ್ಥರಾದ ಸೇವಕರ ಸಾಲಿಗೆ ಸೇರಲ್ಪಟ್ಟರು - ಪ್ರವಾದಿಗಳ, ಯೇಸು ಕ್ರಿಸ್ತನ, ಯುದಾಯದ ಕ್ರೈಸ್ತರ, ಮತ್ತು ಪೌಲ ಹಾಗೂ ಇತರೆ ಉಪದೇಶಕರನ್ನು ಹಿಂಬಾಲಿಸಿದರು. ದೇವರ ಸೇವೆಯಲ್ಲಿ ಹಿಂಜರಿಕೆ ಉಂಟಾಗುವಾಗ, ನಂಬಿಕೆಯಲ್ಲಿ ಮುಂದುವರೆದ, ಬೈಬಲಿನ ಕಾಲದ ಜನರನ್ನು ನೆನಪುಮಾಡಿ ನಂಬಿಗಸ್ತರಾಗಿರಬೇಕು. ದೈವ ಭಕ್ತಿಯಲ್ಲಿದವರ ಸಂಗಡವಿದ್ದ ನೋಹ ಮತ್ತು ಅವನ ಹೆಂಡತಿಯನ್ನು ನೆನಪುಮಾಡಿರಿ; ದ್ರೋಹಿಗಳಾದ ಇಸ್ರಾಯೇಲ್ಯರ ನಡುವೆ ಇದ್ದ ಮೋಶೆಯನ್ನು ನೆನಪು ಮಾಡಿರಿ; ಪರದೇಶದ ಬಾಬೆಲಿನಲ್ಲಿದ್ದ ದಾನಿಯೇಲ ನನ್ನು ನೆನಪು ಮಾಡಿರಿ. ಅವರು ದೇವರನ್ನು ಸೇವಿಸಿ, ಸಾವಿರಾರು ವರ್ಷಗಳ ನಂತರದ ಹಾಗೂ ಸಾವಿರಾರು ಮೈಲುಗಳ ಅಂತರದಲ್ಲಿರುವ ನಮಗೆ ಉತ್ತಮವಾದ ಮಾದರಿಯಾದರು. ನೋಹನು ಪ್ರಸಂಗಿಸುವದರಲ್ಲಿ ಮುಂದಾದಾಗ, ಅವನ ಕುಟುಂಬದವರು ಮಾತ್ರ ಅವನ ಸಂದೇಶವನ್ನು ಆಲಿಸಿದರು. ಐಗುಪ್ತರ ವಿಗ್ರಹಗಳ ನಡುವೆ ಬೆಳೆದ ಮೋಶೆಯು ನಂಬಿಗಸ್ತನಾಗಿದ್ದನು. ಮತ್ತು ಅರಣ್ಯದಲ್ಲಿ ದ್ರೋಹಿಗಳಾದ ಇಸ್ರಾಯೇಲ್ಯರನ್ನು ನಡಿಸುವಾಗ ನಂಬಿಗಸ್ತನಾಗಿದ್ದನು. ಅಸಹಜ ಹಾಗೂ ಅನೈತಿಕತೆಯ ನಡುವೆ ದಾನಿಯೇಲನು ಕರ್ತನನ್ನು ಸೇವಿಸಿದನು. ನಮಗೆ ಈ ಲೋಕದಲ್ಲಿ ಹಿಂಸೆ, ನಿಂದೆ ಅಲಕ್ಷ ಅಥವಾ ನಮ್ಮ ನಂಬಿಕೆಗೆ ಅಪಹಾಸ್ಯವನ್ನು ಹೊಂದುವಾಗ, ನಂಬಿಗಸ್ತರಾದ, ಪ್ರಖ್ಯಾತಿಗೊಂಡ ಜನರನ್ನು ಅನುಸರಿ ಸೋಣ.

## ವಿರೋಧವನ್ನು ನಿರೀಕ್ಷಿಸಿ (2:15ಬಿ, 16)

ನಂಬಿಗಸ್ತರನ್ನು ವಿರೋಧಿಸುವವರು ದೇವರ ವಿರೋಧಿಗಳೇ, ಜನರ ಇತರ ಆಸಕ್ತಿಗಳಿಗೂ ವಿರೋಧಿಗಳೇ ಸೈತಾನನ ಮಾರ್ಗ ಸುಗಮ, ದೇವರ ಮಾರ್ಗ ಕಷ್ಟಕರವಾದದ್ದು ಎಂದು ದೇವ ಸೇವಕರಿಗೆ ತಿಳಿಸುವವರಾಗಿದ್ದಾರೆ. ಈ ಮಾತುಗಳಿಂದ ಕ್ರೈಸ್ತರಿಗೂ ಮತ್ತು ಅಕ್ರೈಸ್ತರಿಗೂ ಸಂದೇಶವನ್ನು ನೀಡಿ, ದೇವರ ಮಾರ್ಗಕ್ಕಿಂತಲೂ, ಸೈತಾನನ ಮಾರ್ಗ ಉತ್ತಮ ಎಂದು ಉತ್ತೇಜಿಸುತ್ತಾರೆ.

ಪಾಪದ ಪ್ರತಿಫಲವು ಕೆಟ್ಟದ್ದೆ. ನಾವು ಮಾಡುವಂತದ್ದನ್ನು ದೇವರು ಮೆಚ್ಚುವಂತೆ ಸೈತಾನನಿಗೆ ಅದು ಬೇಸರವಾಗುತ್ತದೆ. ನಿಮ್ಮ ಉತ್ತಮ ಆಲೋಚನೆಯನ್ನು ಮಾತುಗಳನ್ನು, ಕಾರ್ಯಗಳನ್ನು ಸೈತಾನನು ವಿರೋಧಿಸುತ್ತಾನೆ. ಆ ಉತ್ತಮವಾದ ಚಟುವಟಿಕೆಗಳನ್ನು ನಾಶಮಾಡಲು ಯಾರನ್ನಾದರು ಉಪಯೋಗಿಸುತ್ತಾನೆ. ಸೈತಾನನು ನಿಮ್ಮನ್ನು ವಿರೋಧಿಸುವಾಗ ಆಶ್ಚರ್ಯಪಡಬೇಡಿರಿ, ಅದನ್ನು ನೀವು ನಿರೀಕ್ಷಿಸಲೇಬೇಕು!

ಕೆಲವು ವಿಧದಲ್ಲಿ, ಪಾಪವು ಆಕರ್ಷಣೆವುಳ್ಳದ್ದಾಗಿದ್ದರೂ, ಅದು ಮರಣದಲ್ಲಿ ಅಂತ್ಯಗೊಳ್ಳುತ್ತದೆ. ಅಥವಾ ದೇವರಿಂದ ಪ್ರತ್ಯೇಕಮಾಡುತ್ತದೆ, "ಪಾಪದ ಸಂಬಳ ಮರಣ" (ರೋಮಾಪುರ 6:23). ಕೆಲವು ಸಾರಿ ನಾವುಗಳು ಪಾಪದ ಭಯಂಕರವಾದ ಪರಿಣಾಮವನ್ನು ತಪ್ಪಿಸಿಕೊಳ್ಳಬಹುದೆಂದು ಯೋಚಿಸುತ್ತೇವೆ, ಕೆಟ್ಟ ಪರಿಣಾಮವಿಲ್ಲವೆಂದು ಮರಣವನ್ನೆ ಉಂಟುಮಾಡಿತು. ಅದು ಗಂಭೀರವಾದದ್ದೆ ದೇವರ ಮಾರ್ಗವು ಈ ಜೀವಿತಕ್ಕೆ ಲಾಭಕರವಾಗಿದ್ದು, ದೇವರೊಂದಿಗಿನ ನಿತ್ಯಜೀವವನ್ನು ನೀಡುತ್ತದೆ. ಕ್ರೈಸ್ತ ಜೀವಿತವನ್ನು ಜೀವಿಸುವಾಗ, ವಿರೋಧವು ಬರುವಂಥದ್ದೆ, ಆದರೆ ನಿತ್ಯಾನಂದವನ್ನು, ದೇವರೊಂದಿಗೂ ಮತ್ತು ಮನುಷ್ಯರೊಂದಿಗೂ ಅನುಭವಿಸಲು ನಿರೀಕ್ಷಿಸಬಹುದು.

## ಸಹೋದರರನ್ನು ಪ್ರೀತಿಸಿರಿ (2:17, 18)

ಕೆಲವು ಜನರು ಥೆಸಲೊನೀಕದವರ ಸಂಗಡ ಇರಲು ಇಷ್ಟ ಪಡದೆ ಇದ್ದರೂ, ಇತರರು ಅವರೊಂದಿಗಿರಲು ಸಂತೋಷಪಟ್ಟರು. ಕೆಲವರು ಅವರ ಕ್ರಿಯೆಗಳನ್ನು ವಿರೋಧಿಸಿದರೂ, ಇತರರು ಅವರನ್ನು ಮೆಚ್ಚಿಕೊಂಡರು. ಪೌಲ, ಸೀಲ, ತಿಮೊಥೆಯರು, ಥೆಸಲೊನೀಕ ಸಭೆಯವರಿಂದ ಬೀಳ್ಕೊಂಡ ನಂತರ, ತಿರಿಗಿ ಅವರನ್ನು ಮುಖಾಮುಖಿಯಾಗಿ ಸಂಧಿಸಲು ಬಯಸಿದ್ದನ್ನು ಅವರುಗಳು ತಿಳಿಯ ಬಯಸಿದರು.

ಇತರ ಸ್ಥಳಗಳಲ್ಲಿ ಇರುವ ನಮ್ಮ ಸಹೋದರರಿಗೆ, ಉತ್ತೇಜನಕಾರಿಯಾದ ಇನ್ನೊಂದು ಚರ್ಚೆಯನ್ನು ಈ ಪತ್ರಿಕೆಯಲ್ಲಿ ಗಮನಿಸುತ್ತೇವೆ: ನಾವು ಅವರನ್ನು ಕಳಕೊಂಡಿದ್ದೇವೆ ಮತ್ತು ನಾವು ಅವರೊಂದಿಗೆ ಇರಲು ಬಯಸುತ್ತೇವೆ. ಹೌದು ಕೆಲವರು ಅವರ ಬಗ್ಗೆ ಚಿಂತನೆಯನ್ನು ಮಾಡುವದಿಲ್ಲ, ಆದರೆ ಅವರಿಗಾಗಿ ನಾವು ಉತ್ತಮವಾದ ಚಿಂತನೆಯನ್ನು ಹೊಂದಿರುವೆವು! ಈ ಯೋಚನೆಗಳನ್ನು ಅವರು ಅರಿಯಲೇಬೇಕು. ಪ್ರೀತಿ, ಸಂವಾದ ಮತ್ತು ಮಮತೆಯು ಕ್ರೈಸ್ತ ಅನ್ಯೋನ್ಯತೆಯ ಪಾತ್ರವಾಗಿರುತ್ತದೆ. ಅವುಗಳನ್ನು ತೋರಿಸುವುದು ಪ್ರೀತಿ ಮತ್ತು ಮಮತೆಯ ದ್ಯೋತಕವಾಗಿರುತ್ತದೆ. ನಿಮ್ಮ ಸಹೋದರ ಸಹೋದರಿಯರನ್ನು ಪ್ರೀತಿಸಿರಿ, ಅವರು ಅವುಗಳನ್ನು ತಿಳಿಯಲಿ!

ಹೃದಯದ ಆಶೆ ಮತ್ತು ಯೋಜನೆಗಳು ಯಾವಾಗಲು ಕ್ರಿಯೆಯಾಗುವದಿಲ್ಲ. ಪೌಲನು ಥೆಸಲೊನೀಕಕ್ಕೆ ಹಿಂದಿರುಗುವ ವಿಷಯವು ಸಹ ಇದನ್ನು ಒಳಗೊಂಡಿತ್ತು. ಈ ಉದ್ದೇಶಗಳನ್ನು ಸೈತಾನನು ತಾತ್ಕಲಿಕವಾಗಿ ತಡೆಗಟ್ಟಿದ್ದನು. ದೇವರ ಮಕ್ಕಳಿಗೆ, ಸೈತಾನನಿಂದ ಉಂಟಾಗುವ ಅಡಚಣೆಗಳು ತಾತ್ಕಾಲಿಕವಾದದ್ದೆ. ಪೌಲ, ಸೀಲ, ಮತ್ತು ತಿಮೊಥೆಯರು ಥೆಸಲೊನೀಕದವರನ್ನು ಈ ಜೀವಿತದಲ್ಲಿ ಅಥವಾ ಮುಂದಿನ ಜೀವಿತದಲ್ಲಾಗಲಿ ಪುನಃ ಸಂಧಿಸುವವರಾಗಿದ್ದರು. ಸೈತಾನನು ಇದನ್ನು ತಡೆಗಟ್ಟಲು ಅಸಾಧ್ಯ.

ಕೆಲವರು ತಮ್ಮ ಸುತ್ತಲಿರುವ ಪರಿಸರದಿಂದ ಮಾರ್ಗದರ್ಶನವನ್ನು ಹೊಂದಲು ಬಯಸುತ್ತಾರೆ, ಅವಕಾಶದ ಮೂಲಕ ದೇವರು ಒಳ್ಳೆಯದನ್ನು ಬಯಸುವನು, ಕೆಟ್ಟ ಸೂಚನೆಯು ದೇವರ ತಿರಸ್ಕಾರ ಎಂದು ತಿಳಿಯುವರು. ಇದು ದೈವ ಶಾಸ್ತ್ರದ ನಿಯಮವಲ್ಲ. ದೇವರ ಚಿತ್ತವನ್ನು ನೆರವೇರಿಸಲು, ನಿಶ್ಚಯವಾದ ಅವಕಾಶವು ದೊರೆಯುತ್ತದೆ, ಆದರೆ ಆ ಅವಕಾಶಗಳ ಮೂಲಕ ಕೆಟ್ಟದ್ದನ್ನು ಮಾಡುವ ಅಥವಾ ಇತರರ ಕುರಿತು ಅನ್ಯಾಯದ ಮಾರ್ಗವನ್ನು ಹಿಡಿಯುವ ಸಂಭವವು ಇರುತ್ತದೆ. ಯಾವುದೇ ರಾಷ್ಟ್ರವು ಸೇವಕರ ಪ್ರಯತ್ನಗಳನ್ನು ನಿರಾಕರಿಸುವುದಾದರೆ, ಅಥವಾ ಸುವಾರ್ತಾಸೇವೆಗೆ ಅಡ್ಡಿ ಪಡಿಸುವುದಾದರೆ, ದೇವರಿಗೆ ಸೇವಕರ ಅಗತ್ಯತೆ ಇರುವದಿಲ್ಲ ಅಥವಾ ಸವಾರ್ತೆಯ ಅಗತ್ಯತೆ ಇಲ್ಲವೆಂಬ ಅರ್ಥವಲ್ಲ. ಎಲ್ಲಿಯವರೆಗೂ ದೇವರು ಜನರಿಗೆ ಒಳ್ಳೇ ಮತ್ತು ಕೆಟ್ಟದ್ದನ್ನು ಮತ್ತು ಇಚ್ಛೆಯನ್ನು ಆರಿಸಿಕೊಳ್ಳುವರು, ಆದ್ದರಿಂದ, ಅವರೇ ದೇವರ ಕಾರ್ಯಕ್ಕೆ ವಿರೋಧವಾಗುತ್ತಾರೆ.

ನಿಮ್ಮ ಪರಿಸರವು ನೀವು ಒಳ್ಳೇಯದನ್ನು ಮಾಡದಂತೆ ತಡೆಯದೆ ಇರಲಿ ಅಥವಾ ಕೆಟ್ಟದ್ದಕ್ಕೆ ನಡೆಸದೆ ಇರಲಿ! ಯಾವುದೇ ಸಂಧರ್ಭದಲ್ಲೂ ದೇವರನ್ನೇ ಹಿಂಬಾಲಿಸಿ. ದೇವರ ವಾಕ್ಯವು ನಮ್ಮನ್ನ ಆಯ್ಕೆಗೆ ನಡೆಸುವಾಗ, ಒಳ್ಳೇಯದನ್ನು ಆರಿಸಿಕೊಂಡು ದೇವರಿಗೆ ಮೆಚ್ಚಿಗೆಯಾಗಲು ಪ್ರಯತ್ನಿಸಿರಿ. ಒಂದು ವೇಳೆ, ದೇವರ ವಾಕ್ಯವು ಒಂದೇ ಆಯ್ಕೆಯನ್ನು ನೀಡುವಾಗ, ವಿರೋಧದ ನಡುವೆಯು ನಾವು ಅದನ್ನೆ ಹಿಂಬಾಲಿಸಬೇಕು.

ನಮ್ಮ ಪ್ರೀತಿಯನ್ನು ನಮ್ಮದೇ ಆದ ವಿಧದಲ್ಲಿ ತೋರ್ಪಡಿಸಲು, ವಿರೋಧವು ಅಡ್ಡಿಪಡಿಸುತ್ತದೆ. ಕ್ರೈಸ್ತರಾದ ನಾವು, ಕಷ್ಟಗಳು ನಮ್ಮ ಕಾರ್ಯಕ್ಕೆ ಅಡ್ಡಿಯಾಗದಂತೆ ನೋಡಿ ಕೊಳ್ಳಬೇಕು. ಕ್ರೈಸ್ತರಾದ ನಮಗೆ, ಜೀವವಿರುವಲ್ಲಿ ಪ್ರೀತಿ ಇರುತ್ತದೆ!

## ಪುನಃ ಸೇರಿಕೊಳ್ಳುವದಕ್ಕೆ ಆಶಿಸಿರಿ! (2:19, 20)

ಕ್ರೈಸ್ತರಿಗೆ ಉಂಟಾಗುವ ಯಾವುದೇ ಹಿನ್ನಡೆಯು, ತಾತ್ಕಲಿಕವಾದದ್ದೆ: ಕ್ರಮೇಣವಾಗಿ ಎಲ್ಲಾ ಸಮಸ್ಯೆಯು ಇಲ್ಲದಾಗುತ್ತದೆ. ಯೇಸು ಎಲ್ಲರಿಗೂ ಕರ್ತನಾಗಿರುವದರಿಂದ ವೈರಿಯನ್ನು ಮತ್ತು ಮರಣವನ್ನು ಇಲ್ಲದಂತೆ ಮಾಡುವನು (1 ಕೊರಿಂಥ 15:23-26). ಇತರ ನಂಬಿಗಸ್ತರಾದ ದೇವರ ಮಕ್ಕಳೆಂದು ಅಲ್ಪಕಾಲ ಮಾತ್ರ ದೂರವಿರುವೆವು, ಜೊತೆ ಸೇವಕರ ಮತ್ತು ಯೇಸುವಿನ ಸಂಗಡದ ಸೇರುವಿಕೆಯು ನಮಗಾಗಿ ಕಾದಿದೆ.

ವಚನ 2ರ ಅಂತ್ಯದಲ್ಲಿ ಯೇಸುವಿನ ಬರೋಣದ ಕುರಿತು ತಿಳಿಸಲಾಗಿದೆ (2:19, 20). ಸೋಮಾರಿಗಳಾದ ಕ್ರೈಸ್ತರಿಗೂ ಮತ್ತು ಆತನನ್ನು ಬಿಟ್ಟವರಿಗೂ ಇದು ಎಚ್ಚರಿಕೆಯ ದೊಡ್ಡ ಸೂಚನೆಯಲ್ಲ. ಬೋಧಕರುಗಳು ತಮ್ಮ ಜನರಲ್ಲಿ ಅತಿಯಾದ ಭರವಸವನ್ನು ಇಟ್ಟಿದ್ದರಿಂದ, ಯೇಸುವಿನ ಆಗಮನ ವಿಷಯದ ಮೂಲಕ ಅವರನ್ನು ಪ್ರೋತ್ಸಾಯಿಸಿದ್ದಾರೆ. ಕ್ರಿಸ್ತನ ಆಗಮನವು ಅವರೆಲ್ಲರೂ ಪುನಃ ಸೇರುವದಕ್ಕೆ ಒಂದು ಕಾರಣವಾಗಿದೆ. ಮುತ್ತಿನ ಬಾಗಿಲುಗಳು ಆಶ್ಚರ್ಯವೆ: ಬಂಗಾರದ ಬೀದಿಯು ಅಮೋಘವೆ: ಆದರೆ ದೇವರೊಂದಿಗೂ ಮತ್ತು ದೇವ ಜನರೊಂದಿಗೂ ಇರುವದು ಮಿಗಿಲಾದ ಆನಂದ ಮತ್ತು ಗೌರವವಾಗಿದೆ!

ಈ ಬೋಧಕರುಗಳು ಏನನ್ನು ಹೇಳುತ್ತಿರುವರು? "ಯೇಸು ತಿರಿಗಿ ಬರುತ್ತಾನೆ! ಅದರ ಕುರಿತು ನಮಗೆ ಆನಂದವಾಗುತ್ತದೆ! ಏಕೆ? ನಾವು ನಿಮ್ಮನ್ನು ನೋಡಿ, ನಿಮ್ಮಸಂಗಡವೇ ಸದಾಕಾಲ ಇರುವೆವು! ನಿಮ್ಮ ಕುರಿತು ನಮಗಿರುವ ಚಿಂತನೆಯನ್ನು ನೀವು ಅರಿಯಬೇಕೆಂದು ನಿಮಗಾಗಿ ಬರೆದಿರುವೆವು!"

ನಮ್ಮ ಕ್ರೈಸ್ತರಿಗೆ ಸಹಾಯಿಸಲು, ಎಂಥಾ ಒಂದು ಒಳ್ಳೆಯ ಉದಾಹರಣೆಯಾಗಿರುತ್ತದೆ. ನಮ್ಮ ವಿದ್ಯಾರ್ಥಿಗಳಿಗೆ ಇದನ್ನು ದಿನ ನಿತ್ಯವೂ ತಿಳಿಸುವಾಗ ಎಂಥಾ ದೊಡ್ಡ ಉತ್ತೇಜನವು ಅವರಿಗೆ ಉಂಟಾಗುತ್ತದೆ, ನಿಮ್ಮ ಜೊತೆಯಲ್ಲಿ ನಾನು ಪರಲೋಕದಲ್ಲಿರಲು ಆಶಿಸುತ್ತೇನೆ! "ಯಾರಾದರು ಸಹೋದರ ಅಥವಾ ಸಹೋದರಿಯು," ಯೇಸು ತಿರಿಗಿ ಬರಬೇಕು,

“ಆಗ ನಾನು ನಿನ್ನ ಸಂಗಡ ಸದಾಕಾಲ ಇರುತ್ತೇನೆ ಎಂದು ಹೇಳುವವರು ನಮಗೆ ಉತ್ತೇಜನವಲ್ಲವೆ!”

## ಮುಕ್ತಾಯ

ಬೋಧಕರುಗಳು, ತಮ್ಮ ವಿದ್ಯಾರ್ಥಿಗಳ ಸಂಗಡ ಬಾಂದವ್ಯದಲ್ಲಿರಲು ಅಪೇಕ್ಷಿಸಿದರೆ, ಆ ಸಭೆಯು ಬಲವಾಗಿರುತ್ತದೆ. ವಿದ್ಯಾರ್ಥಿಗಳು ಬೋಧನೆಗೆ ಪ್ರತಿಕ್ರಿಯೆ ನೀಡಿದರೆ, ಬೋಧಕರುಗಳು ಉತ್ತೇಜನಗೊಳ್ಳುತ್ತಾರೆ, ಮತ್ತು ಅವರ ಮಾದರಿಯನ್ನೆ ಅವರು ಅನುಸರಿಸಬೇಕೆಂದು ತಿಳಿಯಪಡಿಸಬೇಕು. ಉತ್ತಮ ಮಾದರಿಯು, ಕ್ರೈಸ್ತರ ಸಂಕಷ್ಟದ ಸಮಯದಲ್ಲಿ ಉತ್ತೇಜನಕಾರಿಯಾಗಿರುತ್ತದೆ.

2 ನೇ ಅಧ್ಯಾಯದಲ್ಲಿರುವ ಈ ವಚನಗಳು; ಕ್ರೈಸ್ತರ ನಡುವಿನ ಸಬಂಧವನ್ನು ಅಭಿವೃದ್ಧಿಪಡಿಸುವದಕ್ಕೆ ಸಹಕರಿಸುತ್ತದೆ. ಸಂಬಂಧದ ಕುರಿತು ಧ್ಯಾನಿಸಿ, ಈ ಬೋಧಕರುಗಳು ಅಭಿವೃದ್ಧಿಪಡಿಸಿದ ಸ್ನೇಹವು ಕ್ರೈಸ್ತರೊಂದಿಗಿನ ಸಂಬಂಧವನ್ನು ಬಲಪಡಿಸುತ್ತದೆ. ದೇವರ ಕುಟುಂಬವನ್ನು ನಮ್ಮ ಕುಟುಂಬವನ್ನಾಗಿ ಮಾಡಿಕೊಳ್ಳುವಾಗ, ಇದರ ಅನುಭವದ ಆನಂದವು ನಮ್ಮದಾಗುತ್ತದೆ.